ಹಟ್ಟಿ ಚಿನ್ನದ ಗಣಿಯ ಚಿನ್ನದ ಅದಿರಿನ ಪ್ರಮಾಣ

2650 (3438) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಹಣಕಾಸಿನ ವರ್ಷದಲ್ಲಿ ರಾಯಚೂರು ಜಿಲ್ಲೆ ಹಟ್ಟಿ ಚಿನ್ನದ ಗಣಿಯಲ್ಲಿ ಹೊರತೆಗೆದ ಚಿನ್ನದ ಅದಿರಿನ ಪ್ರಮಾಣ ಎಷ್ಟು; ಇದರಿಂದ ಉತ್ಪಾದನೆಯಾದ ಪರಿಶುದ್ಧ ಚಿನ್ನವೆಷ್ಟು ;

ಆ) ಸದರಿ ಗಣಿಯ ಉತ್ಪಾದನಾ ವೆಚ್ಚಕ್ಕೂ ಗಣಿಗಾರಿಕಾ ವೆಚ್ಚಕ್ಕೂ ವ್ಯತ್ಯಾಸ ಕಂಡಿದೆಯೇ; ಇದರಿಂದ ಕಂಪನಿಗೆ ಲಾಭ ಬಂದಿದೆಯೇ;

ಇ) ಪ್ರಸಕ್ತ ಸಾಲಿನಲ್ಲಿ ಚಿನ್ನದ ನಿಕ್ಷೇಪವನ್ನು ತೆಗೆಯಲುದ್ದೇಶಿಸಿರುವ ಅಂದಾಜು ಎಷ್ಟು ;

ಈ) ಈ ಕಂಪನಿ ಪ್ರಸ್ತುತ ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿದೆಯೇ; ಇಲ್ಲಿ ಚಿನ್ನದ ನಿಕ್ಷೇಪವಿಲ್ಲದೆ ಬೇರೆ ಇತರೆ ಖನಿಜಗಳನ್ನು ತೆಗೆಯಲಾಗುವುದೇ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಕಳೆದ ಹಣಕಾಸಿನ ವರ್ಷ 2000-2001 ರಲ್ಲಿ ಹಟ್ಟಿ ಚಿನ್ನದ ಗಣಿಯಲ್ಲಿ 3,35,845 ಮೆಟ್ರಿಕ್ ಟನ್ ಅದಿರನ್ನು ಹೊರತೆಗೆದು 1785 ಕಿಲೋ ಗ್ರಾಮ್ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ.

ಆ) ಉತ್ಪಾದನಾ ವೆಚ್ಚಕ್ಕೂ, ಗಣಿಗಾರಿಕೆ ವೆಚ್ಚಕ್ಕೂ ಯಾವುದೇ ಗಮನಾರ್ಹ ವ್ಯತ್ಯಾಸ ಕಂಡುಬಂದಿರುವುದಿಲ್ಲ. ಕಳೆದ ಹಣಕಾಸಿನ ವರ್ಷ 2000-2001ರ ಲೆಕ್ಕ ಪರಿಶೋಧನೆಯು ಪ್ರಗತಿಯಲ್ಲಿರುತ್ತದೆ. ಹಟ್ಟಿ ಚಿನ್ನದ ಗಣಿಯಿಂದ ರೂ.4.00 ಕೋಟಿ ನಗದು ಲಾಭ ಬಂದಿರುತ್ತದೆ. ಚಿತ್ರದುರ್ಗ ಚಿನ್ನದ ಗಣಿಯಲ್ಲಿ ನಗದು ನಷ್ಟವನ್ನು ಅನುಭವಿಸಿದೆ.

ಇ) ಪ್ರಸಕ್ತ ಸಾಲಿನಲ್ಲಿ ನಿಗಮದ ಮಂಡಳಿಯ ಪ್ರಕಾರ ಹಟ್ಟಿ ಚಿನ್ನದ ಗಣಿಯಲ್ಲಿ 4,78,500 ಟನ್‌ಗಳಷ್ಟು ಅದಿರನ್ನು ಸಂಸ್ಕರಿಸಿ 2,423 ಕೇಜಿ ಪರಿಶುದ್ಧ ಚಿನ್ನ ಉತ್ಪಾದನೆಯ ಗುರಿಯನ್ನು ಹಾಕಿಕೊಂಡಿರುತ್ತದೆ.

ಈ) ಕಳೆದ ಹಣಕಾಸಿನ ವರ್ಷದಿಂದ ಪಟ್ಟಿ ಚಿನ್ನದ ಗಣಿ ನಿಗಮವು ನಗದು ಲಾಭವನ್ನು ಗಳಿಸಲು ಸಾಧ್ಯವಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ನಿಗಮದ ಯೋಜನೆಯ ಪ್ರಕಾರ ಸುಮಾರು 790 ಲಕ್ಷ ರೂ.ಗಳ ನಗದು ಲಾಭವನ್ನು ಗುರಿಯಲ್ಲಿ ಇಟ್ಟುಕೊಂಡಿರುತ್ತದೆ. ಏಪ್ರಿಲ್ 2001ರಿಂದ ದಿನಾಂಕ: 17-7-2001 ರವರೆಗೆ ಈಗಾಗಲೇ 681.76 ಕೇಜ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ. ಜೂನ್ 2001ರ ಮಾಹೆಯಲ್ಲಿ 225 ಕೇಜ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ.

ಚಿನ್ನದ ನಿಕ್ಷೇಪವಲ್ಲದೆ ಬೇರೆ ಇತರೆ ಖನಿಜಗಳನ್ನು ನಿಗಮವು ತೆಗೆಯುತ್ತಿರುವುದಿಲ್ಲ.

ಚಿಂತಾಮಣಿ ಪಟ್ಟಣದ ವರ್ತೂಲ ರಸ್ತೆ ನಿರ್ಮಾಣ

2651 (3057) ಶ್ರೀ ಚೌಡರೆಡ್ಡಿ (ಚಿಂತಾಮಣಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಂತಾಮಣಿ ಪಟ್ಟಣದ ವರ್ತೂಲ ರಸ್ತೆ ಸರ್ಕಾರದ ಆದೇಶ ಸಂಖ್ಯೆ : ನುಯೋಪ್ರಾ : ಚಿ : ಸ್ಥೂ : ಆಯೋ : ಅಂತಿಮ : 2000-2001 ದಿನಾಂಕ : 7-9-2000ರ ಮೇರೆಗೆ ಮಂಜೂರಾಗಿ ಈ ಬಗ್ಗೆ ನಕ್ಷೆ ತಯಾರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವರ್ತುಲ ರಸ್ತೆ ಪ್ರದೇಶದಲ್ಲಿ ಸ್ಥಳವನ್ನು ಸ್ವಾಧೀನ ಮಾಡಿಕೊಳ್ಳಲು ವಿಳಂಭವಾದ್ದರಿಂದ ಈ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳು ಬಂದು ಈ ಕಾಮಗಾರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಚಿಂತಾಮಣಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಸ್ಥೂಲಾಬಿವೃದ್ಧಿ ಯೋಜನೆಗೆ ಸರ್ಕಾರವು ಕಾಯ್ದೆ 1961ರ ಪ್ರಕರಣ 13(3) ರನ್ವಯ ಆದೇಶ ಸಂಖ್ಯೆ ನಆಇ 312 ಎಂಆಟಿ 2000 ಬೆಂಗಳೂರು ದಿನಾಂಕ: 22-7-2000ರಲ್ಲಿ ಅಂತಿಮ ಅನುಮೋದನೆ ನೀಡಿದೆ. ಸದರಿ ಯೋಜನೆಯಲ್ಲಿ ವರ್ತುಲ ರಸ್ತೆಯನ್ನು ರೂಪಿಸಲು ಸಹ ಪ್ರಸ್ತಾಪಿಸಲಾಗಿದೆ.

ಆ) ಇಲ್ಲ.